## ಕರ್ನಾಟಕ ಜೀವವೈವಿಧ್ಯ ಮಂಡಳಿಯ ಏಳನೇ ಸಭೆಗೆ ಸಂಬಂಧಿಸಿದ ವಿಷಯಗಳು.

**1. ದಿನಾಂಕ 19/4/2007ರಂದು ಜರುಗಿದ ಆರನೇ ಸಭೆಯ ನಡವಳಿಗಳನ್ನು ಓದುವುದು ಮತ್ತು ಧೃಢೀಕರಿಸುವುದು**

ದಿನಾಂಕ 19/4/2007ರಂದು ಜರುಗಿದ ಮಂಡಳಿಯ ಆರನೇ ಸಭೆಯ ನಡವಳಿಗಳನ್ನು ಪತ್ರ ಸಂ./ಕಜಿಮಂ/ಎಂ.ಟಿ.ಜಿ/03/6ನೇ ಸಭೆ/2006–07 ದಿನಾಂಕ 2ನೇ ಜೂನ್ 2007 ರಂದು ಎಲ್ಲಾ ಸದಸ್ಯರಿಗೆ ಕಳುಹಿಸಲಾಗಿರುತ್ತದೆ. ಯಾವುದೇ ಅಭಿಪ್ರಾಯ ಬಂದಿಲ್ಲವಾದ್ದರಿಂದ ಇದನ್ನು ದೃಢೀಕರಿಸುವುದು.

**2. 6ನೇ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸುವುದು.**

**ಅ) ಕರ್ನಾಟಕ ಜೀವವೈವಿಧ್ಯ ನಿಯಮಗಳು 2005ನ್ನು ಕಾನೂನುಬದ್ಧಗೊಳಿಸುವ ಬಗ್ಗೆ ಹಾಗೂ ಕೋರಂ ಸಂಖ್ಯೆಯನ್ನು ನಿರ್ಧರಿಸುವ ಬಗ್ಗೆ.**

ಈ ವಿಷಯವನ್ನು 6ನೇ ಮಂಡಳಿಯ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ಕೋರಂ ಸಂಖ್ಯೆಯನ್ನು **5 ರಿಂದ 3ಕ್ಕೆ** ಕಡಿತಗೊಳಿಸಿದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ದಿನಾಂಕ 18/6/2007ರಲ್ಲಿ ಸಲ್ಲಿಸಲಾಗಿದೆ. ಈ ಬಗ್ಗೆ ಸರ್ಕಾರದ ಆದೇಶವನ್ನು ನಿರೀಕ್ಷಿಸಲಾಗಿದೆ.

**ಆ) ಜೀವವೈವಿಧ್ಯ ಸಂರಕ್ಷಣೆ ಸಂಬಂಧಿ ಯೋಜನೆಗಳನ್ನು ಪರಿಶೀಲಿಸಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಚೆನ್ನೈ ಹಾಗೂ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ:**

6ನೇ ಮಂಡಳಿಯ ಸಭೆಯ ಸಲಹೆಯಂತೆ ಜೀವವೈವಿಧ್ಯ ಸಂರಕ್ಷಣೆ ಸಂಬಂಧಿಸಿದ ಯೋಜನೆಗಳ ಪ್ರಸ್ತಾವನೆಗಳನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಚೆನ್ನೈ ಮತ್ತು ಭಾರತ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ಭಾರತ ಸರ್ಕಾರಕ್ಕೆ ಪತ್ರ ಸಂ ಕಜೀಮಂ/ಯೋಜನೆ/04/06–07/724 ದಿನಾಂಕ 16/6/2007ರಂದು ಸಲ್ಲಿಸಲಾಗಿದೆ ಹಾಗೂ ಈ ಕುರಿತು ಅನುದಾನಿತ ಸಂಸ್ಥೆಗಳಿಗೆ ನೆನಪೋಲೆಯನ್ನು ಸಹ ಕಳುಹಿಸಲಾಗಿದೆ. ವಿಶ್ವಬ್ಯಾಂಕಿನ, ಭಾರತ ಅಭಿವೃದ್ಧಿ ಮಾರುಕಟ್ಟೆಯು ಆಯ್ಕೆ ಮಾಡಿದ 2500 ಯೋಜನಾ ಪ್ರಸ್ತಾವನೆಗಳಲ್ಲಿ 50 ಪ್ರಸ್ತಾವನೆಗಳನ್ನು ಅಂತಿಮ ಪೂರ್ವ ಆಯ್ಕೆ ಮಾಡಲಾಗಿರುತ್ತದೆ. ಆಯ್ಕೆ ಮಾಡಿದ ಪ್ರಸ್ತಾವನೆಗಳ ಪಟ್ಟಿಯಲ್ಲಿ ಮಂಡಳಿಯ ಯಾವುದೇ ಪ್ರಸ್ತಾವನೆಯು ಸೂಚಿತವಾಗಿಲ್ಲ. ಯೋಜನೆಗಳ ಪ್ರಸ್ತಾವನೆಗಳನ್ನು ಕಾರ್ಯಗತಗೊಳಿಸುವ ಸಂಸ್ಥೆಗಳನ್ನು ಗುರುತಿಸಿ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಈ ವಿಷಯವನ್ನು ಸಭೆಯ ಗಮನಕ್ಕೆ ತರಲಾಗಿದೆ.

ತಾತಗುಣಿ ಎಸ್ಟೇಟ್‌ನಲ್ಲಿ ಸಸ್ಯೋಧ್ಯಾನವನ್ನು ಸ್ಥಾಪಿಸುವ ಸಲುವಾಗಿ ಮಂಡಳಿಯ ಪ್ರಸ್ತಾವನೆಯನ್ನು ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸದರಿ ಪ್ರಸ್ತಾವನೆಯಲ್ಲಿ ಕೆಲವು ನ್ಯೂನತೆಗಳನ್ನು ಗಮನಿಸಿ ಸರಿಪಡಿಸಲು ಮಂಡಳಿಯನ್ನು ಕೇಳಿರುತ್ತದೆ. ಸದರಿ ಪ್ರಸ್ತಾವನೆಯ ನ್ಯೂನತೆಗಳನ್ನು ಸರಿಪಡಿಸಲು ಸೂಕ್ತ ಕ್ರಮಕೈಗೊಳ್ಳಲು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ವಲಯ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, (ನಗರ ವಿಭಾಗ) ಇವರುಗಳನ್ನು ಕೇಳಲಾಗಿದೆ. ಸರಿಪಡಿಸಿದ ಯೋಜನಾ ಪ್ರಸ್ತಾವನೆ ಅವರಿಂದ ಬಂದ ನಂತರ ಭಾರತ ಸರ್ಕಾರಕ್ಕೆ ಸಲ್ಲಿಸಲಾಗುವುದು. **(ಅನುಬಂಧ–IIA ಲಗತ್ತಿಸಲಾಗಿದೆ)**

**ಇ) ಶ್ರೀ ಗಂಗಾಧರ ವಿ. ಮಡ್ಡಿಕೇರಿ, ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರ ಸೇವೆಯನ್ನು ಮಂಡಳಿಯಲ್ಲಿ ಮುಂದುವರಿಸುವ ಬಗ್ಗೆ:**

6ನೇ ಮಂಡಳಿಯ ಸಭೆಯ ತೀರ್ಮಾನದಂತೆ ಶ್ರೀ ಗಂಗಾಧರ ವಿ. ಮಡ್ಡಿಕೇರಿ, ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರ ಸೇವೆಯನ್ನು ಮಾತೃ ಇಲಾಖೆಗೆ ಪತ್ರ ಸಂ.ಕಜೀಮಂ/ಸಿಬ್ಬಂದಿ/02/3–6/687. ದಿನಾಂಕ. 5/6/2007.ರಂದು ಹಿಂದಿರುಗಿಸಲಾಗಿದೆ. ಅದೇ ದಿನ ಇವರ ಸ್ಥಾನಕ್ಕೆ ಮತ್ತೊಬ್ಬ ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ)ಯನ್ನು ಜಂಟಿ ನಿರ್ದೇಶಕರನ್ನು, ನಿಯೋಜಿಸಲು ಮೀನುಗಾರಿಕೆ ಇಲಾಖೆ ಕೋರಲಾಗಿತ್ತು. ಅದರಂತೆ ಡಾ. ಎಂ.ಜಿ ಜಯರಾಂರವರನ್ನು ಮಂಡಳಿಯ ಕಾರ್ಯನಿರ್ವಾಹಣಾಧಿಕಾರಿ (ಮೀನುಗಾರಿಕೆ) ಹುದ್ದೆಗೆ ನಿಯೋಜಿಸಲಾಗಿದೆ ಹಾಗೂ ಶ್ರೀಯುತರು ದಿನಾಂಕ 28/8/2007ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಮುಂದುವರೆದಂತೆ, ಜನತಾ ಜೀವವೈವಿಧ್ಯ ತಯಾರಿಕೆಗೆ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಆ ಅನುದಾನ ಬಿಡುಗಡೆ ಮತ್ತು ಖರ್ಚುವೆಚ್ಚದಲ್ಲಿ ಯಾವುದೇ ರೀತಿಯ ನಿಯಮಾವಳಿಗಳನ್ನು ಪಾಲನೆ ಮಾಡಿರುವುದಿಲ್ಲ. ಮಂಡಳಿಯ ಹಿತಾಸಕ್ತಿಯನ್ನು ಪರಿಗಣಿಸದೆ ಸರ್ಕಾರದ ಹಣವನ್ನು ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಬಿಡುಗಡೆ ಮಾಡಿರುತ್ತಾರೆ. ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ನಡುವೆ ಯಾವುದೇ ರೀತಿಯ ಕರಾರನ್ನು ಮಾಡಿಕೊಂಡಿರುವುದಿಲ್ಲ. ಬಿಡುಗಡೆ ಮಾಡಿದ ಹಣವನ್ನು ಯಾವರೀತಿ ವಿನಿಯೋಗಿಸಬೇಕು ಹಾಗು ಅವರ ಜವಾಬ್ದಾರಿಗಳೇನು ಎಂಬುದರ ಬಗ್ಗೆ ಮನವರಿಕೆ ಮಾಡಿರುವುದಿಲ್ಲ. ಈವರೆಗೆ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಬಿಡುಗಡೆಯಾದ ಮೊತ್ತಕ್ಕೆ ಖರ್ಚುವೆಚ್ಚಗಳ ಪಟ್ಟಿ, ಪ್ರಮಾಣಿತ ಓಚರ್ ಹಾಗೂ ವರದಿಗಳು ಮಂಡಳಿಗೆ ಬಂದಿರುವುದಿಲ್ಲ. ಸರ್ಕಾರದ ಹಣವನ್ನು ಯಾವುದೇ ಒಪ್ಪಂದವಿಲ್ಲದೆ ಯಾವ ಸಂಸ್ಥೆಗೂ ಬಿಡುಗಡೆ ಮಾಡಲು ಬರುವುದಿಲ್ಲ. ಈ ಮೇಲೆ ಕಾಣಿಸಿದ ವಿಷಯಗಳ ಬಗ್ಗೆ ಅಸಮರ್ಪಕ ರೀತಿಯಲ್ಲಿ ಬೇಜಾವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಿರುವುದರಿಂದ ಸಂಬಂಧಿಸಿದ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಜರುಗಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಈ ವಿಷಯವನ್ನು ಮಂಡಳಿಯ ಗಮನಕ್ಕೆ ತರಲಾಗಿದೆ.

**ಈ) ಜೀವವೈವಿಧ್ಯ ಪಾರಂಪರಿಕ ತಾಣವಾಗಿ ಘೋಷಿಸುವ ಬಗ್ಗೆ:**

6ನೇ ಮಂಡಳಿ ಸಭೆಯ ನಿರ್ಣಯದಂತೆ, ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ವೃತ್ತ ಇವರಿಗೆ ನಲ್ಲೂರು ಹುಣಸೇತೋಪನ್ನು ಪಾರಂಪರಿಕ ಜೈವಿಕ ವೈವಿಧ್ಯ ತಾಣವೆಂದು ಘೋಷಿಸಿರುವ ಹಿನ್ನಲೆಯಲ್ಲಿ ಸದರಿ ಪ್ರದೇಶದ ಸಂರಕ್ಷಣೆ ಮತ್ತು ಅಭಿವೃದ್ದಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ **(ಅನುಬಂಧ–I ಲಗತ್ತಿಸಲಾಗಿದೆ)** ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇವರ ಯೋಜನಾ ಪ್ರಸ್ತಾವನೆಯನ್ನು ಪರಿಶೀಲನೆಗಾಗಿ ಮಂಡಳಿಯ ಸಭೆಯ ಮುಂದಿಡಲಾಗಿದೆ. **(ಅನುಬಂಧ–II ಲಗತ್ತಿಸಲಾಗಿದೆ)**

ಈ ಪ್ರದೇಶವು ಕಂದಾಯ ಇಲಾಖೆಯ ವಶದಲ್ಲಿದ್ದು ಅರಣ್ಯ ಇಲಾಖೆಗೆ ವರ್ಗಾಯಿಸಿದ್ದಲ್ಲಿ ಹುಣಸೆ ತೋಪಿನ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬಹುದು ಹಾಗೂ ದನ ಕರುಗಳಿಂದ ಹಾಗೂ ಸ್ಥಳೀಯರಿಂದ ಆಗುವ ಶೋಷಣೆಗಳನ್ನು ತಪ್ಪಿಸಬಹುದ. ಈ ವಿಷಯವನ್ನು ಮಂಡಳಿಯ ಗಮನಕ್ಕೆ ತರಲಾಗಿದೆ.

## 3. ಕುವೆಂಪು ಸ್ಮಾರಕ ಜೈವಿಕ ಕೆಲಸ ಕಾರ್ಯಗಳ ಪ್ರಗತಿ ವರದಿಯ ಕುರಿತು.

ಕಳೆದ 6ನೇ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ಕುವೆಂಪು ಜೈವಿಕ ಧಾಮದ ಕಾರ್ಯ ಚಟುವಟಿಕೆಗಳನ್ನು ಕುವೆಂಪು ಪ್ರತಿಷ್ಠಾನ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಚರ್ಚಿಸಿ, ಅನುಮೋದಿತ ಕ್ರಿಯಾ ಯೋಜನೆಯಂತೆ ಕುವೆಂಪು ಸ್ಮಾರಕ ಜೈವಿಕ ಧಾಮದ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಹಿಂದಿನ ಸದಸ್ಯ ಕಾರ್ಯದರ್ಶಿಗಳಿಂದ ಅನುಮೋದಿತ 2006–07ನೇ ಸಾಲಿನಲ್ಲಿ ರೂ 19.74ಲಕ್ಷ ಹಾಗೂ 2007–08ನೇ ಸಾಲಿನಲ್ಲಿ ರೂ 16.70.ಲಕ್ಷ ಒಟ್ಟು ರೂ 36.44 ಲಕ್ಷ ಹಣವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಈ ಮಧ್ಯದಲ್ಲಿ ಕುವೆಂಪು ಪ್ರತಿಷ್ಠಾನದವರು ಕೆಲವು ಜೈವಿಕಧಾಮದ ಅಭಿವೃದ್ಧಿ ಕುರಿತು ಕೆಲವು ಬೇಡಿಕೆಗಳನ್ನು ಮಂಡಳಿಯ ಮುಂದೆ ಇಟ್ಟಿರುತ್ತಾರೆ. ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ಇವರು ಹೆಚ್ಚುವರಿ ಕೆಲಸ ಕಾರ್ಯಗಳಿಗೆ ಕುವೆಂಪು ಪ್ರತಿಷ್ಠಾನದವರೊಂದಿಗೆ ಚರ್ಚಿಸಿ ಪ್ರಸ್ತಾವನೆಯನ್ನು ಸಲ್ಲಿಸಲು ಕೋರಲಾಗಿತ್ತು. ಮುಂದುವರೆದು ಉಪಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ಇವರು ಹೊಸ ಕಾರ್ಯಗಳಿಗೆ ರೂ 17.05ಲಕ್ಷಗಳ ಪ್ರಸ್ತಾವನೆಯನ್ನು ಮಂಡಿಸಿರುತ್ತಾರೆ. ಇದನ್ನು ಪರಿಷ್ಕರಿಸಿ ಈಗಾಗಲೇ ಮಂಜೂರಾದ ರೂ 28.21ಲಕ್ಷದ ಕಾರ್ಯಗಳಿಗೆ ಬದಲು ರೂ.26.460ಲಕ್ಷ ಹಾಗೂ ರೂ 17.500 ಲಕ್ಷಗಳನ್ನು ಉಳಿತಾಯದ ಮೊತ್ತದಲ್ಲಿ ಭರಿಸಲು ಕೋರಿದ್ದಾರೆ. ಈ ಹಿನ್ನಲೆಯಲ್ಲೆ ಇಂತಹ ಪ್ರಸ್ತಾವನೆಗಳು ಸ್ಥಿರವಾಗಿರಬೇಕೆಂದು ಹಾಗೂ ಆಗಿಂದಾಗ್ಗೆ ಅನುಷ್ಠಾನದ ಸಮಯದಲ್ಲಿ ಬದಲಾವಣೆ ಮಾಡಬಾರದೆಂದು ಸಹ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ಇವರಿಗೆ ತಿಳಿಸಲಾಯಿತು.

ದಿನಾಂಕ 22.8.2007ರಂದು ಕುವೆಂಪು ಪ್ರತಿಷ್ಠಾನದ ಪ್ರತಿನಿಧಿಗಳು ಮಂಡಳಿಯ ಕಛೇರಿಗೆ ಭೇಟಿ ನೀಡಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ಇವರು ಕಳುಹಿಸಿದ ಪರಿಷ್ಕೃತ ಪ್ರಸ್ತಾವನೆಯನ್ನು ತಮ್ಮ ಒಪ್ಪಿಗೆ ಪಡೆದ ನಂತರ ಅನುಷ್ಠಾನಕ್ಕೆ ಕಳುಹಿಸಿರುವುದರಿಂದ ಈ ಕಾರ್ಯಗಳನ್ನು ಅನುಮೋದಿಸಲು ಕೋರಿರುತ್ತಾರೆ ಹಾಗೂ ಪ್ರತಿಷ್ಠಾನದ ಪ್ರತಿನಿಧಿಗಳು ಇನ್ನಾವುದೇ ಪರಿಷ್ಕರಣೆ ಇಲ್ಲದೆಯಿರುವುದರಿಂದ ಈ ಎಲ್ಲಾ ಕಾರ್ಯಕ್ರಮಗಳನ್ನು ಕುವೆಂಪು ಜನ್ಮಶತಮಾನೋತ್ಸವ ದಿನದಂದು ಪೂರ್ಣಗೊಳಿಸಿಲು ಹಾಗೂ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು.

ಈ ಹಿನ್ನಲೆಯಲ್ಲಿ ಕುವೆಂಪು ಪ್ರತಿಷ್ಠಾನದ ಪ್ರತಿನಿಧಿಗಳು ಹಾಗೂ ಉಪಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ಇವರ ಸಮಾಲೋಚನೆಯೊಂದಿಗೆ ಅನುಬಂಧದಲ್ಲಿ ಸೂಚಿಸಿರುವ ಕಾರ್ಯಗಳಿಗೆ ಒಪ್ಪಿಗೆ ನೀಡಲಾಯಿತು. ಮತ್ತು ಜನವರಿ 2008ರ ಅಂತ್ಯದೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ. **(ಅನುಬಂಧ–IIIಲಗತ್ತಿಸಲಾಗಿದೆ)**

## 4. ಜೈವಿಕ ಸಂಪನ್ಮೂಲ ಬಳಕೆಯ ಮೇಲೆ ಶುಲ್ಕ ವಿಧಿಸುವ ಬಗ್ಗೆ.

ಮಂಡಳಿ ಸಭೆಯಲ್ಲಿ ಚರ್ಚಿಸಿದಂತೆ ರಾಜ್ಯದಲ್ಲಿಯ ವಿವಿಧ ಜೈವಿಕ ಸಂಪನ್ಮೂಲಗಳನ್ನು ಬಳಸುತ್ತಿರುವ ಔಷಧೀಯ ಕಂಪೆನಿಯಿಂದ ವಾರ್ಷಿಕ ವಹಿವಾಟಿನ ಮೇಲೆ ಪ್ರತಿಶತ ಒಂದು ಅಥವಾ ಎರಡರಷ್ಟನ್ನು ಶುಲ್ಕ ವಸೂಲಿಕರಿಸುವ ಬಗ್ಗೆ ಪ್ರಸ್ತಾವನೆಯನ್ನು ಪತ್ರ ಸಂ ಕೆಬಿಬಿ/ಇತರೆ/44ಎ/ಶುಲ್ಕ/06–07/627 ದಿನಾಂಕ 27/4/2007 ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ. **(ಅನುಬಂಧ– IV ಲಗತ್ತಿಸಲಾಗಿದೆ).**

ರಾಜ್ಯದ 150 ಆಯರ್ವೇದ ಔಷಧ ತಯಾರಕರಿಗೆ ಪತ್ರ ಬರೆದು ತಾವು ಬಳಸುವ ಜೈವಿಕ ಸಂಪನ್ಮೂಲಗಳ ಬಳಕೆ ಹಾಗೂ ಮೂಲದ ಬಗ್ಗೆ ಘೋಷಣೆ ನೀಡುವ ಸಲುವಾಗಿ ನೀಡಲಾದ ಪ್ರಕಟಣೆಗೆ 91 ಸಂಸ್ಥೆಗಳು ಮಾಹಿತಿಯನ್ನು ನೀಡಿರುತ್ತಾರೆ. ಉಳಿದವರು ಇನ್ನೂ ಮಾಹಿತಿ ನೀಡಬೇಕಾಗಿದೆ.

ಇತ್ತೀಚೆಗೆ ಈ ವಿಷಯದಲ್ಲಿ ಔಷಧಿ ತಯಾರಕರ ಹಾಗೂ ಜೈವಿಕ ತಂತ್ರಜ್ಞರ ಸಭೆಯಲ್ಲಿ ಚರ್ಚಿಸಿ ಈ ಕೆಳಕಂಡ ಅಂಶಗಳಿಗೆ ವಿವರಣೆ ನೀಡಲಾಯಿತು.

1. ಕೆಲವು ವಸ್ತುಗಳು ಔಷಧೀಯ ಗುಣಗಳನ್ನು ಹೊಂದಿದ್ದು, ಅವುಗಳು ಮಾರುಕಟ್ಟೆಯಲ್ಲಿ ಸುಲಭವಾಗಿ ಮಾರಾಟವಾಗುವುದರಿಂದ ಈ ವಸ್ತುಗಳ ಘೋಷಣೆ ಬೇಕಿಲ್ಲವೆಂದು ತಿಳಿಸಿರುತ್ತಾರೆ. ಉದಾಹರಣೆಗೆ ಹುಣಸೆ, ಅರಿಶಿನ, ಶುಂಠಿ, ಜೇನುತುಪ್ಪ ಇತ್ಯಾದಿ.

2. ಕೆಲವು ಔಷಧಿ ತಯಾರಕರು ಹಲವು ಜೈವಿಕ ಸಂಪನ್ಮೂಲಗಳನ್ನು ವಿತರಕರು ಹಾಗೂ ಸರಬರಾಜುದಾರರುಗಳಿಂದ ಪಡೆಯಲಾಗುತ್ತಿದೆಯೆಂದು ತಿಳಿಸಿರುವುದರಿಂದ ಅಂತಹ ಸರಬರಾಜುದಾರರು ಹಾಗೂ ವಿತರಕರಿಗೆ ಪತ್ರಗಳನ್ನು ಮಂಡಳಿಯಿಂದ ಬರೆಯಲಾಗುವುದು.

3. ಮತ್ತು ಕೆಲವು ವಸ್ತುಗಳನ್ನು ರಾಜ್ಯದ ಹೊರಗಡೆಯಿಂದ ಪಡೆಯಲಾಗುವುದು.

4. ಈಗಾಗಲೇ ಸಂಪನ್ಮೂಲಗಳನ್ನು ಬಳಸುತ್ತಿರುವ ಉದ್ದಿಮೆಗಳು ಘೋಷಿಸಿರುವ ಬಳಕೆಯ ಬಗ್ಗೆ ಅನುಮತಿಯನ್ನು ನಿರ್ದಿಷ್ಟ ನಮೂನೆಯಲ್ಲಿ **ಅನುಬಂಧ– V ರ** ಪ್ರಕಾರ ನೀಡಲಾಗುವುದು.

**5. ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ ಕುರಿತು:**

ಜನತಾ ಜೀವವೈವಿಧ್ಯ ದಾಖಲಾತಿಯ ಪ್ರಕ್ರಿಯೆಯನ್ನು ಆಯಾ ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಈಗಾಗಲೇ ಜೈವಿಕ ವೈವಿಧ್ಯ ಕಾಯಿದೆ 2002ರಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಈಗಾಗಲೇ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿದ್ದು, ಜನತಾ ಜೀವವೈವಿಧ್ಯ ದಾಖಲಾತಿಯ ಕಾರ್ಯಗಳನ್ನು ಅರಣ್ಯ ಇಲಾಖೆ, ಸರ್ಕಾರೇತರ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಹಾಗೂ ಮಹಾವಿದ್ಯಾಲಯಗಳ ಸಹಯೋಗದೊಂದಿಗೆ ನಡೆಸಲಾಗುತ್ತಿದೆ. ಇದರ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ | ಅರಣ್ಯ ಇಲಾಖೆ, ಸರ್ಕಾರೇತರ ಸಂಸ್ಥೆಗಳು, ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯಗಳ ವಿವರಗಳು | ಜಿಲ್ಲೆಗಳ ಹೆಸರು | ನಿಗದಿಪಡಿಸಿದ ಜನತಾ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸಂಖ್ಯೆ |
|---|---|---|---|
| 1 | ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ಮಹಿಳಾ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ದಿ ಸಂಸ್ಥೆ | ಚಿತ್ರದುರ್ಗ | 5 |
| 2 | ಶ್ರೀ ರೇಣುಕಾದೇವಿ ಮಹಿಳಾ ಮತ್ತು ಮಕ್ಕಳ ಕ್ಷೇಮಾಭಿವೃದ್ದಿ ಸಂಸ್ಥೆ, | ದಾವಣಗೆರೆ. | 5 |
| 3 | ವನಸಿರಿ ಗ್ರಾಮೀಣಾಭಿವೃದ್ದಿ ಸಂಸ್ಥೆ, | ಹಾವೇರಿ. | 5 |
| 4 | ಕೃಷಿಕಾ ಟ್ರಸ್ಟ್ | ಮಂಡ್ಯ | 5 |
| 5 | ಜನಚಿಂತನ, | ಚಿಕ್ಕಮಗಳೂರು | 8 |

| | | | |
|---|---|---|---|
| 6 | ಜೈವಿಕಪರಿಸರ ಸಂರಕ್ಷಣಾ ಮತ್ತು ಸಂಶೋಧನಾ ಟ್ರಸ್ಟ್, | ಹಾಸನ | 5 |
| 7 | ಸಂಡೂರು ಪರಿಸರ ಶಿಕ್ಷಣ ಮತ್ತು ಅಭಿವೃದ್ದಿ ಸಂಸ್ಥೆ, | ಬಳ್ಳಾರಿ | 5 |
| 8 | ತುಮಕೂರು ವಿಜ್ಞಾನ ಕೇಂದ್ರ, | ತುಮಕೂರು. | 15 |
| 9 | ಉಪ ಅರಣ್ಯ ಸಂರಕ್ಷಣಾಧಿಕಾರಿ | ಹಾಸನ | 5 |
| 10 | ಉಪ ಅರಣ್ಯ ಸಂರಕ್ಷಣಾಧಿಕಾರಿ | ಕೊಳ್ಳೆಗಾಲ | 5 |
| 10 | ಉಪ ಅರಣ್ಯ ಸಂರಕ್ಷಣಾಧಿಕಾರಿ | ಬಳ್ಳಾರಿ | 5 |
| 11 | ಉಪ ಅರಣ್ಯ ಸಂರಕ್ಷಣಾಧಿಕಾರಿ | ಬೀದರ್ | 5 |
| 12 | ಉಪ ಅರಣ್ಯ ಸಂರಕ್ಷಣಾಧಿಕಾರಿ | ಧಾರವಾಡ | 5 |
| 13 | ಉಪ ಅರಣ್ಯ ಸಂರಕ್ಷಣಾಧಿಕಾರಿ | ಗದಗ್ | 5 |
| 14 | ಉಪ ಅರಣ್ಯ ಸಂರಕ್ಷಣಾಧಿಕಾರಿ | ಮೈಸೂರು | 5 |
| 15 | ಉಪ ಅರಣ್ಯ ಸಂರಕ್ಷಣಾಧಿಕಾರಿ | ಶಿವಮೊಗ್ಗ | 9 |
| 16 | ಬೆಂಗಳೂರು ವಿಶ್ವವಿದ್ಯಾಲಯ (ಪರಿಸರ ವಿಜ್ಞಾನ) | ಬೆಂಗಳೂರು | 4 |
| 17 | ಡಿಪಾರ್ಟ್‌ವೆಂಟ್ ಆಫ್ ಮೈಕ್ರೋಬಯಲಾಜಿ, ಪಿಜಿ. ಸೆಂಟರ್, (ಮಂಗಳೂರು ವಿಶ್ವವಿದ್ಯಾಲಯ) | ಕೊಡಗು | 5 |
| 18 | ಕೃಷಿ ವಿಶ್ವವಿದ್ಯಾಲಯ | ಶಿರಸಿ | 5 |
| 19 | ಕೃಷಿ ವಿಶ್ವವಿದ್ಯಾಲಯ | ಪೊನ್ನಂಪೇಟೆ | 5 |
| 20 | ಎಂಪ್ರಿ (ಕೆಯುಐಡಿಎಫ್‌ಸಿ ಪ್ರಾಜೆಕ್ಟ್) | ಬೆಂಗಳೂರು | 18 |
| 21 | ವಿಜ್ಞಾನ ಕಾಲೇಜ್ | ಬೀದರ್ | 5 |
| | **ಒಟ್ಟು** | | **139** |

ಇದಲ್ಲದೆ, ಕರ್ನಾಟಕ ಜೀವವೈವಿಧ್ಯ ಮಂಡಳಿಯು ಜೀವವೈವಿಧ್ಯ ದಾಖಲಾತಿ ಪ್ರಕ್ರಿಯೆಗೆ ಆಸಕ್ತ ಸರ್ಕಾರೇತರ ಸಂಸ್ಥೆಗಳನ್ನು ಆಯ್ಕೆ ಮಾಡಲು ರಾಜ್ಯಾದ್ಯಂತ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಜೀವವೈವಿಧ್ಯ ನಿರ್ವಹಣೆ ಸಮಿತಿಗಳನ್ನು ರಚಿಸಲು ಜನತಾ ಜೀವವೈವಿಧ್ಯ ಸಿದ್ದಪಡಿಸಲು ತರಬೇತಿ ಕಾರ್ಯಕ್ರಮಗಳಿಗೆ ಹಾಗೂ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಮಾರ್ಗದರ್ಶನ ಉಸ್ತುವಾರಿ ವಹಿಸಲು ಆಸಕ್ತಿ ಇರುವ ಸರ್ಕಾರೇತರ ಸಂಸ್ಥೆಗಳಿಗೆ ಆಹ್ವಾನ ನೀಡಿದ ಮೇರೆಗೆ 182 ಸಂಸ್ಥೆಗಳಲ್ಲಿ ಈ ಕೆಳಕಂಡ 6 ಸಂಸ್ಥೆಗಳು ಜೀವವೈವಿಧ್ಯ ದಾಖಲಾತಿ ಪ್ರಕ್ರಿಯೆಗೆ ಸೂಕ್ತವಾದ ಸಂಸ್ಥೆಗಳೆಂದು ಆಯ್ಕೆ ಮಾಡಲಾಗಿದೆ.

1. ಸಂಜೀವಿನ ವಿದ್ಯಾವರ್ಧಕ ಸಂಸ್ಥೆ, ಬ್ರಹ್ಮಪೂರ, ಗುಲ್ಬರ್ಗಾ
2. ಸ್ಕೊಡ್‌ವೆಸ್ ಸಂಸ್ಥೆ (ರಿ), ಸವಿನಿಲಯ, ಮರಾಠಿಕೊಪ್ಪ ಮುಖ್ಯ ರಸ್ತೆ, ಶಿರಸಿ, ಉತ್ತರ ಕನ್ನಡ – 581401
3. ಕರ್ನಾಟಕ ಯುನಾನಿ ಮೆಡಿಕಲ್ ಅಸೋಸಿಯೇಷನ್, ನಂ.170, 7ನೇ ಅಡ್ಡರಸ್ತೆ, ಬಿ.ಎಂ ನಗರ, ತಾವರೆಗೆ ಪಾರ್ಕ್, ಬಿ.ಇ.ಟಿ. ಸ್ಕೂಲ್ ರಸ್ತೆ, ಬೆಂಗಳೂರು–29
4. ಸಮಾಜ ಪರಿವರ್ತನ ಸಮುದಾಯ (ಎಸ್.ಪಿ.ಎಸ್) ಆಶಾದೀಪ, ಜಯನಗರ ಕ್ರಾಸ್, ಸಪ್ತಾಪುರ, ಧಾರವಾಡ–01.
5. ಬಿಜಾಪುರ ಇಂಟಿಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ಬರ್ಡ್ಸ್) ಹುನಗುಂದ, ನಾಗಲಿಂಗನಗರ ಹತ್ತಿರ, ಎನ್.ಹೆಚ್ 13 ಹುನಗುಂದ – 587 118 ಬಾಗಲಕೋಟೆ ಜಿಲ್ಲೆ.
6. ನಗರ ಹಾಗೂ ಗ್ರಾಮೀಣ ಅಭಿವೃದ್ದಿಗಾಗಿ ಸಮೂಹ ಗಾರ್ಡ್ ಸಂಸ್ಥೆ, ಕೇಂದ್ರ ಕಛೇರಿ, ನಂ 20, ಬ್ಲಾಕ್ ನಂ.7, 3ನೇ ಮುಖ್ಯ ರಸ್ತೆ, ಮಹಾಶಕ್ತಿ ರಸ್ತೆ, ಶಕ್ತಿ ನಗರ, ಮೈಸೂರು–57 0019.

ಇವುಗಳಲ್ಲದೆ ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ವಿಶ್ವ ವಿದ್ಯಾನಿಲಯಗಳನ್ನು ಸಹ ಜೀವವೈವಿಧ್ಯ ದಾಖಲಾತಿ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಲು ಸಹ ಕ್ರಮ ಕೈಗೊಳ್ಳಲಾಗಿದೆ.

**6. 2007–08ನೇ ಸಾಲಿನ ಮಂಡಳಿಯ ಆಯವ್ಯಯ ಬಗ್ಗೆ.**

ಸಭೆಯಲ್ಲಿ ಈ ವಿಷಯ ಕುರಿತು ಚರ್ಚಿಸಿದಂತೆ, ಮಂಡಳಿಗೆ ಸರ್ಕಾರದಿಂದ ರೂ*60.00 ಲಕ್ಷಗಳು ದೊರೆತಿದ್ದು, ಈ ಬಗ್ಗೆ ಮಾಸಿಕ ಪ್ರಗತಿ ಪರಿಶೀಲನಾ ವರದಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಹೆಚ್ಚಿನ ಅನುದಾನದ ಅವಶ್ಯಕತೆಯಿದ್ದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. **(ಅನುಬಂಧ– VI ರಲ್ಲಿ ವಿವರಿಸಿದೆ)**

**7. ಕರ್ನಾಟಕ ಜೀವವೈವಿಧ್ಯ ಮಂಡಳಿಯ 2003–04, 2004–05 ಮತ್ತು 2005–06 ಆರ್ಥಿಕ ವಾರ್ಷಿಕ ವರದಿಗಳ ಮೇಲೆ ಮಹಾಲೇಖಪಾಲರ ಆಕ್ಷೇಪಣೆಗಳಿಗೆ ಉತ್ತರ ಸಲ್ಲಿಸುವ ಕುರಿತು.**

**1. 2003–04, 2004–05 ಮತ್ತು 2005–06 ಲೆಕ್ಕಪತ್ರಗಳನ್ನು ಅನುಮೋದಿಸುವ ಬಗ್ಗೆ**

ಕರ್ನಾಟಕ ಜೀವವೈವಿಧ್ಯ ಮಂಡಳಿಯು 1ನೇ ಆಗಸ್ಟ್, 2003ರಲ್ಲಿ ಪ್ರಾರಂಭವಾದ ನಂತರ ಕಳೆದ ಮೂರು ವರ್ಷಗಳ ಆರ್ಥಿಕ ಲೆಕ್ಕಪತ್ರಗಳನ್ನು ದಿನಾಂಕ: 16–11–2006 ರಂದು ಮಹಾಲೇಖಪಾಲರು ಲೆಕ್ಕ ಪರಿಶೋಧನೆ ಮಾಡಿರುತ್ತಾರೆ ಹಾಗೂ 2003–04, 2004–05 ಮತ್ತು 2005–06 ಪರಿಶೋಧಕ ಲೆಕ್ಕಪತ್ರಗಳನ್ನು ಕಳುಹಿಸಿದ್ದು ನಂತರ ಮಂಡಳಿಯ ಆಕ್ಷೇಪಣೆಗಳನ್ನು ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಸರಿಪಡಿಸಿ ಮಂಡಳಿಯ ಪರಿಶೀಲನೆಗೆ ಮಂಡಿಸಿದೆ. ಮಂಡಳಿಯು ಒಪ್ಪಿಗೆ ಪಡೆದ ನಂತರ ಮಹಾಲೇಖಪಾಲರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗುವುದು. (ಮಾಹಿತಿಗಾಗಿ ದಿನಾಂಕ:26–10–2007ರಂದು ಒಂದು ಪ್ರತಿಯನ್ನು ಈಗಾಗಲೇ ಕಳುಹಿಸಲಾಗಿದೆ.) **(ಅನುಬಂಧ–VII ನ್ನು ಲಗತ್ತಿಸಲಾಗಿದೆ)**

**2. 2006–07ರ ಲೆಕ್ಕಪತ್ರ ವರದಿಯ ಮಂಡನೆ ಬಗ್ಗೆ:**

ಕರ್ನಾಟಕ ಜೀವವೈವಿಧ್ಯ ಮಂಡಳಿಯು 2006–07ರ ಲೆಕ್ಕ ಪತ್ರ ವರದಿಯನ್ನು ನಿಗದಿತ ವೇಳೆಯಲ್ಲಿ ಸಿದ್ದ ಪಡಿಸದೆ ಇದ್ದುದರಿಂದ ಈಗ ವರದಿಯನ್ನು ಸಿದ್ದಪಡಿಸಿ ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ. ಮಂಡಳಿಯು ಒಪ್ಪಿಗೆ ಪಡೆದ ನಂತರ ಮಹಾಲೇಖಪಾಲರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗುವುದು. **(ಅನುಬಂಧ– VIIIನ್ನು ಲಗತ್ತಿಸಲಾಗಿದೆ)**

**3. 2006–07ರ ವಾರ್ಷಿಕ ವರದಿಯ ಮಂಡನೆ ಬಗ್ಗೆ.**

ಕರ್ನಾಟಕ ಜೀವವೈವಿಧ್ಯ ಮಂಡಳಿಯು 2006–07ರ ವಾರ್ಷಿಕ ವರದಿಯನ್ನು ಮಂಡಳಿಯ ಅನುಮೋದನೆಗೆ ಇಡಲಾಗಿದೆ. **(ಅನುಬಂಧ– IXನ್ನು ಲಗತ್ತಿಸಲಾಗಿದೆ).**

**8. ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮುಖಾಂತರ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಗೆ ಅರಿವು, ತರಬೇತಿ ಮತ್ತು ಮಾರ್ಗದರ್ಶನವನ್ನು ನೀಡಲು ಸಮಾಲೋಚಕರ / ತಜ್ಞರ ನೇಮಕಾತಿ**

ಕರ್ನಾಟಕ ಜೀವವೈವಿಧ್ಯ ಮಂಡಳಿಯು ಕಾಲಕಾಲಕ್ಕೆ ಜೀವವೈವಿಧ್ಯ ಸಂಭಂಧಿತ ಅರಿವು, ಜಾಗೃತಿ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಕೈಗೊಳ್ಳಬೇಕಾಗಿರುತ್ತದೆ. ಈ ಸಂಬಂಧ ಜೀವವೈವಿಧ್ಯ ನಿಯಮಾವಳಿಯ ಪ್ರಕರಣ 22 (7) ರಂತೆ ಸಮಾಲೋಚಕರನ್ನು ನೇಮಿಸಿಕೊಳ್ಳುವ ಅವಕಾಶವಿರುತ್ತದೆ.

ಈ ಹಿನ್ನಲೆಯಲ್ಲಿ ರಾಜ್ಯಾದ್ಯಂತ ತರಬೇತಿ ಹಾಗೂ ಅರಿವನ್ನುಂಟುಮಾಡಲು ಸಮಾಲೋಚಕರು / ಸಂಸ್ಥೆಯನ್ನು ನೇಮಕ ಮಾಡಿಕೊಳ್ಳುವುದು ಸೂಕ್ತವಾಗಿರುತ್ತದೆ. ಸಮಾಲೋಚಕರನ್ನು ಸಂಪನ್ಮೂಲಗಳ ವ್ಯಕ್ತಿಯನ್ನಾಗಿ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಲಾಗಿರುತ್ತದೆ.

ಆದುದರಿಂದ ಸಮಾಲೋಚಕರಿಗೆ/ತಜ್ಞರಿಗೆ ಪ್ರತಿ ತರಬೇತಿ ಕಾರ್ಯಕ್ರಮಕ್ಕೆ ಒಟ್ಟಾರೆ ರೂ.5.000/– (ಐದು ಸಾವಿರ ರೂಪಾಯಿಗಳು) (ಪ್ರವಾಸಭತ್ಯೆ, ದಿನಭತ್ಯೆ, ತಂಗುವಭತ್ಯೆ ಮತ್ತು ಗೌರವದನ ಸೇರಿ) ಸಂಭಾವನೆಯಾಗಿ ನೀಡಲು ಮಂಡಳಿಯ ಅನುಮೊದನೆಗಾಗಿ ಸಲ್ಲಿಸಿದೆ ಹಾಗೂ ಇಂತಹ ತರಬೇತಿ ಕಾರ್ಯಕ್ರಮಗಳಿಗೆ ತಗಲುವ ವೆಚ್ಚವನ್ನು ಭರಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರವನ್ನು ನೀಡಲು ವಿಷಯವನ್ನು ಅನುಮತಿಗಾಗಿ ಮಂಡಿಸಿದೆ.

**9. ಜೀವವೈವಿಧ್ಯ ಸೂಕ್ಷ್ಮನೆಲೆ ತಾಣಗಳು:**

ಪರಿಸರ ವಿಜ್ಞಾನ ಕೇಂದ್ರ, ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರಾದ ಪ್ರೋ ಮಾದವ ಗಾಡ್ಗಿಲ್ ಅವರ ನೇತೃತ್ವದಲ್ಲಿ ಕರ್ನಾಟಕದಲ್ಲಿ ಹಲವಾರು ಸೂಕ್ಷ್ಮ ಜೀವವೈವಿಧ್ಯ ಸೂಕ್ಷ್ಮನೆಲೆ ತಾಣಗಳನ್ನು ಗುರುತಿಸಿರುತ್ತಾರೆ. ಈ ಜೀವವೈವಿಧ್ಯ ಸೂಕ್ಷ್ಮನೆಲೆಗಳನ್ನು ಪಾರಂಪರಿಕ ಜೀವವೈವಿಧ್ಯ ತಾಣವನ್ನಾಗಿ ಘೋಷಿಸುವ ಸಲುವಾಗಿ ವಿವಿಧ ಇಲಾಖೆಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕೋರಿ ಪತ್ರವನ್ನು ಬರೆಯಲಾಗಿದೆ. **(ಅನುಬಂಧ–X ರಲ್ಲಿ ಲಗತ್ತಿಸಲಾಗಿದೆ)** ಈಗಾಗಲೇ ಯಾಣ ಪ್ರದೇಶವನ್ನು ಜೀವವೈವಿಧ್ಯ ಸೂಕ್ಷ್ಮನೆಲೆ ತಾಣವನ್ನಾಗಿ ಘೋಷಿಸುವ ಸಲುವಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರತ್ತದೆ. ಆ ಪ್ರಸ್ತಾವನೆಯನ್ನು ಕುರಿತು ಹಲವು ಮಾಹಿತಿಗಳನ್ನು ಕೋರಿ ಮಂಡಳಿಗೆ ಸರ್ಕಾರವು ಪತ್ರವನ್ನು ಬರೆದಿರುತ್ತದೆ. ಈಗಾಗಲೇ ಈ ಬಗ್ಗೆ ಸಂಬಂಧಿಸಿದ ಜಿಲ್ಲಾಪಂಚಾಯತಿ, ಜಿಲ್ಲಾಧಿಕಾರಿಗಳು ಮತ್ತು ಅರಣ್ಯ ಸಂರಕ್ಷಣಾಧಿಕಾರಿಗಳವರಿಗೆ ಪತ್ರವನ್ನು ಈ ಕುರಿತು ಬರೆಯಲಾಗಿದೆ. ಈ ಬಗ್ಗೆ ಜೀವವೈವಿಧ್ಯ ಸೂಕ್ಷ್ಮನೆಲೆ ತಾಣವೆಂದು ಘೋಷಿಸಲು ಮಂಡಳಿಯ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಪರಂಪರಾಗತ ತಾಣಗಳ ಇತರ ಮೂಲಗಳನ್ನು ಗುರುತಿಸಿ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸ್ಥಳೀಯ ಸಂಸ್ಥಗಳನ್ನು ಕೋರಲಾಗಿದೆ.

**10 ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಿಬ್ಬಂದಿ ವರ್ಗದವರಿಗೆ ಪ್ರವಾಸ ಭತ್ಯೆ ನೀಡುವ ಬಗ್ಗೆ.**

ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಕರ್ತವ್ಯದ ಮೇಲೆ ಪ್ರವಾಸ ಕೈಗೊಂಡಲ್ಲಿ ಪ್ರವಾಸಭತ್ಯೆಯ ಬಗ್ಗೆ ಯಾವ ನಿಯಾಮಾವಳಿಗಳನ್ನು ರಚಿಸಿಲ್ಲ. ಮಂಡಳಿಯ ವಾಹನಚಾಲಕರಿಗೆ, ಸರ್ಕಾರಿ ವಾಹನ ಚಾಲಕರಿಗೆ ಲಭ್ಯವಿರುವ ಪ್ರವಾಸ ಭತ್ಯೆಯನ್ನು ನೀಡಲು ಮಂಡಳಿಯ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

**11. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ವಸತಿ ಗೃಹದ ಸೌಲಭ್ಯ ಒದಗಿಸುವ ಬಗ್ಗೆ.**

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿಯವರ ವಾಸ್ತವ್ಯಕ್ಕೆ ಸೂಕ್ತ ವಸತಿ ಗೃಹ ದೊರೆಯದಿರುವುದರಿಂದ ಹಾಗೂ ಇತ್ತೀಚಿನ ದಿನಗಳಲ್ಲಿ ಬಾಡಿಗೆಯು ದುಬಾರಿಯಾಗಿರುವುದರಿಂದ ಮಂಡಳಿಯಿಂದಲೇ ಒಂದು ಮನೆಯನ್ನು ಬಾಡಿಗೆಗೆ ಪಡೆದು ಪೂರೈಸಲು ಮತ್ತು ಅವರಿಗೆ ದೊರೆಯುವ ನಿಯಮಾನುಸಾರ ಮನೆ ಬಾಡಿಗೆ ಭತ್ಯೆ ಹಾಗೂ ಮಾಸಿಕ ಬಾಡಿಗೆ ವೆಚ್ಚಗಳ ವ್ಯತ್ಯಾಸವನ್ನು ಮಾಹೆಯಾನ ರೂ.7.000/–ಗಳ (ಏಳು ಸಾವಿರ ರೂಪಾಯಿಗಳು) ಮಿತಿಯಿಲ್ಲ ಮಂಡಳಿಯಿಂದ ಭರಿಸಲು ಅನುಮತಿಸಬೇಕೆಂದು ವಿಷಯವನ್ನು ಭರಿಸಲು ಮಂಡಳಿಯ ಒಪ್ಪಿಗೆಗಾಗಿ ಮಂಡಿಸಿದೆ. ಅಧಿಕಾರಿಗಳು ಸ್ವಂತ ನಿವಾಸವನ್ನು ಹೊಂದಿರುವುದರಿಂದ ಈ ಬಗ್ಗೆ ಯಾವುದೇ ರೀತಿಯ ಬೇಡಿಕೆಗಳು ಈ ಹಿಂದೆ ಬಂದಿರುವುದಿಲ್ಲ. ಈ ವಿಷಯವನ್ನು ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದ ಹಾಗೂ ಉತ್ತರವನ್ನು ನಿರೀಕ್ಷಿಸಲಾಗಿದೆ. **(ಅನುಬಂಧ– XA ರಲ್ಲಿ ಲಗತ್ತಿಸಲಾಗಿದೆ)**

**12. ಅರಣ್ಯ ಪ್ರದೇಶದೊಳಗಿನ ಜೀವವೈವಧ್ಯ ದಾಖಲಾತಿ ಕ್ರಮದ ಬಗ್ಗೆ**

ಕರ್ನಾಟಕ ಜೀವವೈವಿಧ್ಯ ಮಂಡಳಿಯು ಕೆಲವು ಜಿಲ್ಲೆಗಳಲ್ಲಿ ಗ್ರಾಮ ಪಂಚಾಯತಿಯ ಹಂತಗಳಲ್ಲಿ ಈಗಾಗಲೇ ಜೀವವೈವಿಧ್ಯ ದಾಖಲಾತಿ ಪ್ರಕ್ರಿಯೆ ಆರಂಭಗೊಂಡಿದೆ. ಅದೇ ಮಾದರಿಯಲ್ಲಿ ಅರಣ್ಯ ಪ್ರದೇಶದೊಳಗಿನ ಜೀವವೈವಿಧ್ಯ ದಾಖಲಾತಿ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂಬುದು ಮಂಡಳಿಯ ಆಕಾಂಕ್ಷೆ. ರಾಜ್ಯವು ಶೇ.20ರಷ್ಟು ಅರಣ್ಯವನ್ನು ಹೊಂದಿದ್ದು, ಪಷ್ಪವೃಕ್ಷಗಳು, ಔಷಧೀಯ ಗುಣಗಳುಳ್ಳ ವೃಕ್ಷಗಳನ್ನು ಇತ್ಯಾದಿ ಸಸ್ಯಗಳ ದಾಖಲೀಕರಣದ ಬಗ್ಗೆ ಅರಣ್ಯ ಇಲಾಖೆಯ ಉಸ್ತುವಾರಿಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ದಾಖಲಾತಿ ಕಾರ್ಯಗಳನ್ನು ಪ್ರಾರಂಭಿಸಲು ಅನುಧಾನವನ್ನು ಮಂಡಳಿಯಿಂದ ಭರಿಸಲು ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಿದೆ. **(ಅನುಬಂಧ–XIರಲ್ಲಿ ಲಗತ್ತಿಸಲಾಗಿದೆ)**

**13. ಮಂಗಳೂರು ವಿಶ್ವವಿದ್ಯಾಲಯ ಮಂಗಳೂರು ಇವರು ನಡೆಸುವ ಜೈವಿಕ ವೈವಿದ್ಯ ಕಾರ್ಯಗಾರ ನಡೆಸಲು ಆರ್ಥಿಕ ನೆರವು ಬಗ್ಗೆ.**

ದಿನಾಂಕ:15–02–2008 ಮತ್ತು 16–02–2008 ಮಂಗಳೂರು ವಿಶ್ವವಿದ್ಯಾನಿಲಯದವರು ನಡೆಸಲಿರುವ ಜೈವಿಕ ವೈವಿಧ್ಯ ಕಾರ್ಯಗಾರಕ್ಕೆ ಸುಮಾರು 1.00 ಲಕ್ಷ ರೂಪಾಯಿಗಳು ವೆಚ್ಚವಾಗುವುದೆಂದು ತಿಳಿಸಿ ಕರ್ನಾಟಕ ಜೀವವೈವಿಧ್ಯ ಮಂಡಳಿಯಿಂದ ರೂ.50,000/– ಧನ ಸಹಾಯ ಕೋರಿರುತ್ತಾರೆ. ಉದ್ದೇಶಿತ ಕಾರ್ಯಗಾರ ನಡೆಸಲು ಮಂಡಳಿಯಿಂದ ರೂ.20,000/– ಸಹಾಯ ಧನವನ್ನು ನೀಡಬಹುದು. ವಿಷಯವನ್ನು ಮಂಡಳಿಯ ಒಪ್ಪಿಗೆಗಾಗಿ ಮಂಡಿಸಿದೆ. **(ಅನುಬಂಧ–XIIನ್ನು ಲಗತ್ತಿಸಲಾಗಿದೆ)**

## 14. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಿಬ್ಬಂದಿ ನೇಮಕಾತಿ ಬಗ್ಗೆ:

ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಸಿಬ್ಬಂದಿಯು ಸರಿಯಾಗಿರುವುದಿಲ್ಲ, ಸದರಿ ನೇಮಕಾತಿಯನ್ನು ಸರ್ಕಾರದ ನಿರ್ದೇಶನದ ಮೇರೆಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದು, ಸರಿಯಾದ ಅರ್ಹತೆಯನ್ನು ಹೊಂದಿರುವುದಿಲ್ಲ. ಅಲ್ಲದೆ ಅಂತಹ ಸಿಬ್ಬಂದಿಯನ್ನು ಒದಗಿಸುವ ಯಾವುದೇ ಹೊರಗುತ್ತಿಗೆ ಸಂಸ್ಥೆಯು ಅಸ್ತಿತ್ವದಲ್ಲಿಲ್ಲ. ಆದ್ದರಿಂದ ಸೂಕ್ತ ವಿದ್ಯಾರ್ಹತೆಯುಳ್ಳ ಸಹಾಯಕ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಸಮರ್ಪಕ ರೀತಿಯ ಸಿಬ್ಬಂದಿಯ ಕೊರತೆಯಿರುವುದರಿಂದ ಆರಂಭದ ದಿನಗಳಿಂದಲೇ ಮಂಡಳಿಯ ಲೆಕ್ಕಪತ್ರಗಳು ವ್ಯವಸ್ಥಿತ ರೀತಿಯಲ್ಲಿ ನಿರ್ವಹಣೆಯಾಗುತ್ತಿಲ್ಲ ಎಂಬುದನ್ನು ಮಹಾಲೇಖಪಾಲಕರು ಆನೇಕ ಆಕ್ಷೇಪಣೆಗಳನ್ನು ಎತ್ತಿರುವುದರ ಮೂಲಕ ವ್ಯಕ್ತಗೊಂಡಿರುತ್ತದೆ. ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಲೆಕ್ಕ ಮೇಲ್ವಿಚಾರಕರ ಹುದ್ದೆಯಲ್ಲಿರುವವರ ಅಸಮಪಕ ಜ್ಞಾನದ ನಿಮಿತ್ತ ಮಹಾಲೇಖಪಾಕರಿಗೆ ತಡವಾಗಿ ಲೆಕ್ಕಪತ್ರಗಳನ್ನು ಸಲ್ಲಿಸಲಾಗಿರುತ್ತದೆ ಹಾಗೂ ಮಹಾಲೇಖಪಾಕರು ಎತ್ತಿರುವ ಆಕ್ಷೇಪಣೆಗಳಿಗೆ ಸಮರ್ಪಕ ಉತ್ತರಗಳನ್ನು ಸಹ ನೀಡಲಾಗಿಲ್ಲ. 2006–07ರ ಲೆಕ್ಕಪತ್ರಗಳನ್ನು ಈಗಾಗಲೇ ಮಹಾಲೇಖಪಾಕರಿಗೆ ಸಲ್ಲಿಸಲಾಗಿರುತ್ತದೆ. ಇದೂ ಸಹ ಆಕ್ಷೇಪಣೆಗಳನ್ನು ಹೊಂದುವ ನಿರೀಕ್ಷೆಯಿದೆ.

ಸದರಿ ಲೆಕ್ಕ ಮೇಲ್ವಿಚಾರಕರು ನಿಗಧಿಪಡಿಸಿದ ರೀತಿಯಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸಲು ತನ್ನ ಅಸಾಮರ್ಥ್ಯವನ್ನು ವ್ಯಕ್ತಪಡಿಸಿರುತ್ತಾರೆ. ಈ ನಿಟ್ಟಿನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಮಂಡಳಿಯ ಲೆಕ್ಕಪತ್ರ ನಿರ್ವಹಣೆಯನ್ನು ಮಾಡಲು ಮೆ. ಪಾಂಡುರಂಗ ಶೆಣೈ ಮತ್ತು ಕಂಪೆನಿ ಅವರನ್ನು ನೇಮಕಾತಿಗೊಳಿಸಲು ಮಂಡಳಿಯ ಅನುಮೋದನೆಯನ್ನು ಕೋರಲಾಗಿದೆ. **(ಅನುಬಂಧ –XIIIನ್ನು ಲಗತ್ತಿಸಿದೆ).**

ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಅನುಭವವುಳ್ಳ ಸಿಬ್ಬಂದಿಗಳ ಕೊರತೆಯಿಂದ ಅಗತ್ಯ ಕಡಗಳನ್ನು ಹುಡುಕಿ ಹೊರತೆಗೆಯಲು ತುಂಬಾ ಅಡಚಣೆಯಾಗುತ್ತಿದ್ದು ಇದಕ್ಕಾಗಿ ಅತಿಹೆಚ್ಚಿನ ವೇಳೆ ವ್ಯಯವಾಗುತ್ತಿದೆ. ಆದ್ದರಿಂದ ಖಾಲಿಯಿರುವ ಒಂದು ಕಾರ್ಯನಿರ್ವಾಹಕ ಸಹಾಯಕರ ಹುದ್ದೆಗೆ ಬದಲಾಗಿ ಅರಣ್ಯ ಇಲಾಖೆಯಿಂದ ಪ್ರಥಮ ದರ್ಜೆ ಸಹಾಯಕರನ್ನು ನಿಯೋಜನೆ ಮೇಲೆ ನೇಮಕಗೊಳಿಸಲು ಕೋರಲಾಗಿದೆ.

ತದನಂತರದಲ್ಲಿ ಮಂಡಳಿಯಲ್ಲಿ ಆಡಳಿತ ಕಾರ್ಯಗಳನ್ನು ಸುಸೂತ್ರಗೊಳಿಸಲು ಆಡಳಿತಾಧಿಕಾರಿ ಹುದ್ದೆಗೆ ಒಬ್ಬರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಥವಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಅಥವಾ ಕರ್ನಾಟಕ ಆಡಳಿತ ಸೇವೆಯ (KAS) ಅಧಿಕಾರಿಯ ಸೇವೆಯನ್ನು ನಿಯೋಜನೆ ಮೇರೆಗೆ ಒದಗಿಸುವಂತೆ ಕೋರಲಾಗಿದೆ. ಮಂಡಳಿಯ ದಿನನಿತ್ಯದ ಲೆಕ್ಕಪತ್ರಗಳ ವ್ಯವಹಾರವನ್ನು ಸರಿಯಾಗಿಡಲು ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಒಬ್ಬ ಲೆಕ್ಕಿಗರನ್ನು (Accountant) ಕಾರ್ಯನಿರ್ವಾಹಕ ಸಹಾಯಕರ ಹುದ್ದೆಗೆ ಬದಲಾಗಿ ನಿಯೋಜಿಸಲು ಸಹ ಕೋರಲಾಗಿದೆ.

## 15. 2008–09ರ ಸಾಲಿನ ಆಯವ್ಯಯ ಪ್ರಸ್ತಾವನೆ ಬಗ್ಗೆ:

2008–09ರ ಸಾಲಿನ ಆಯವ್ಯಯ ಮಂಡಣೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದನ್ನು **ಅನುಬಂಧ– XIVರಲ್ಲಿ** ಲಗತ್ತಿಸಲಾಗಿದೆ.

************

## **ಕರ್ನಾಟಕ ಜೀವವೈವಿಧ್ಯ ಮಂಡಳಿಯ ಏಳನೇ ಸಭೆಯ ವಿಷಯಸೂಚಿ**

1. ದಿನಾಂಕ 19/4/2007ರಂದು ಜರುಗಿದ ಆರನೇ ಸಭೆಯ ನಡವಳಿಗಳನ್ನು ಓದುವುದು ಮತ್ತು ಧೃಢೀಕರಿಸುವುದು.
2. 6ನೇ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸುವುದು.

   **ಅ)** ಕರ್ನಾಟಕ ಜೀವವೈವಿಧ್ಯ ನಿಯಮಗಳು 2005ನ್ನು ಕಾನೂನುಬದ್ಧಗೊಳಿಸುವ ಬಗ್ಗೆ ಹಾಗೂ ಕೋರಂ ಸಂಖ್ಯೆಯನ್ನು ನಿರ್ಧರಿಸುವ ಬಗ್ಗೆ.

   **ಆ)** ಜೀವವೈವಿಧ್ಯ ಸಂರಕ್ಷಣೆ ಸಂಬಂಧಿ ಯೋಜನೆಗಳನ್ನು ಪರಿಶೀಲಿಸಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಚೆನ್ನೈ ಹಾಗೂ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ

   **ಇ)** ಶ್ರೀ ಗಂಗಾಧರ ವಿ. ಮಡ್ಡಿಕೇರಿ, ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರ ಸೇವೆಯನ್ನು ಮಂಡಳಿಯಲ್ಲಿ ಮುಂದುವರಿಸುವ ಬಗ್ಗೆ:

   **ಈ)** ಜೀವವೈವಿಧ್ಯ ಪಾರಂಪರಿಕ ತಾಣವಾಗಿ ಘೋಷಿಸುವ ಬಗ್ಗೆ
3. ಕುವೆಂಪು ಸ್ಮಾರಕ ಜೈವಿಕಧಾಮದ ಕೆಲಸ ಕಾರ್ಯಗಳ ಪ್ರಗತಿ ವರದಿಯ ಕುರಿತು.
4. ಜೈವಿಕ ಸಂಪನ್ಮೂಲ ಬಳಕೆಯ ಮೇಲೆ ಶುಲ್ಕ ವಿಧಿಸುವ ಬಗ್ಗೆ
5. ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ ಕುರಿತು
6. 2007–08ನೇ ಸಾಲಿನ ಮಂಡಳಿಯ ಆಯವ್ಯಯದ ಬಗ್ಗೆ.
7. ಕರ್ನಾಟಕ ಜೀವವೈವಿಧ್ಯ ಮಂಡಳಿಯ 2003–04,2004–05ಹಾಗೂ 2005–06ರ ಆರ್ಥಿಕ ವಾರ್ಷಿಕ ವರದಿಗಳ ಮೇಲೆ ಮಹಾಲೇಖಪಾಲರ ಆಕ್ಷೇಪಣೆಗಳಿಗೆ ಉತ್ತರ ಸಲ್ಲಿಸುವ ಕುರಿತು.
8. ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮುಖಾಂತರ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಗೆ ಅರಿವು, ತರಬೇತಿ ಮತ್ತು ಮಾರ್ಗದರ್ಶನವನ್ನು ನೀಡಲು ಸಮಾಲೋಚಕರ / ತಜ್ಞರ ನೇಮಕಾತಿ
9. ಜೀವವೈವಿಧ್ಯ ಸೂಕ್ಷ್ಮನೆಲೆ ತಾಣಗಳು.
10. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಿಬ್ಬಂದಿ ವರ್ಗದವರಿಗೆ ಪ್ರವಾಸ ಭತ್ಯೆ ನೀಡುವ ಬಗ್ಗೆ.
11. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ವಸತಿ ಗೃಹದ ಸೌಲಭ್ಯ ಒದಗಿಸುವ ಬಗ್ಗೆ.
12. ಅರಣ್ಯ ಪ್ರದೇಶದೊಳಗಿನ ಜೀವವೈವಿಧ್ಯ ದಾಖಲಾತಿ ಕ್ರಮದ ಬಗ್ಗೆ
13. ಮಂಗಳೂರು ವಿಶ್ವವಿದ್ಯಾಲಯ ಮಂಗಳೂರು ಇವರು ನಡೆಸುವ ಜೈವಿಕ ವೈವಿದ್ಯ ಕಾರ್ಯಗಾರ ನಡೆಸಲು ಆರ್ಥಿಕ ನೆರವು ಬಗ್ಗೆ.
14. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಿಬ್ಬಂದಿ ನೇಮಕಾತಿ ಬಗ್ಗೆ:
15. 2008–09ರ ಸಾಲಿನ ಆಯವ್ಯಯದ ಪ್ರಸ್ತಾವನೆ ಬಗ್ಗೆ

**********************

**ಮಂಡಳಿಯ ಕಛೇರಿ ವಾಹನದ ಬಳಕೆಯ ಬಗ್ಗೆ:**

ಈ ಹಿಂದೆ ಕರ್ನಾಟಕ ಜೀವವೈವಿಧ್ಯ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯನಿರ್ವಹಣಾಧಿಕಾರಿಗಳು ಕಛೇರಿಯಿಂದ ನಿವಾಸಕ್ಕೆ ಹಾಗೂ ನಿವಾಸದಿಂದ ಕಛೇರಿಗೆ ಓಡಾಡಲು ಒಂದು ಬಾಡಿಗೆ ವಾಹನವನ್ನು (ಟಾಟಾ ಇಂಡಿಕಾ) ಉಪಯೋಗಿಸುತ್ತಿದ್ದರು. ತದನಂತರ ಈ ವಾಹನದ ಬಳಕೆಯಲ್ಲಿ ಹಿಂದೆ ಇದ್ದ ಆಡಳಿತಾಧಿಕಾರಿ ಹಾಗೂ ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ)ಗಳ ಮಧ್ಯ ಜಗಳ ಆಗಿಂದಾಗ್ಗೆ ನಡೆಯುತ್ತಿದ್ದು, ಒಬ್ಬ ಅಧಿಕಾರಿಗೆ ವಾಹನ ದೊರಕಿದರೆ ಇನ್ನೊಬ್ಬರನ್ನು ಬಿಟ್ಟು ವಾಹನವನ್ನು ತೆಗೆದುಕೊಂಡು ಹೋಗುವ ಪರಿಪಾಟವಿತ್ತು ಹಾಗೂ ಇವರು ಉಪಯೋಗಿಸುತ್ತಿದ್ದ ವಾಹನವನ್ನು ಯಾವುದೇ ನಿಯಾಮಾವಳಿಗನುಸಾರವಾಗಿ ಬಾಡಿಗೆಗೆ ಪಡೆದಿರಲಿಲ್ಲ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಾಗಿತ್ತು. ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರು ಕಛೇರಿಯಿಂದ ನಿವಾಸಕ್ಕೆ ಹಾಗೂ ನಿವಾಸದಿಂದ ಕಛೇರಿಗೆ ಓಡಾಡಲು ಪ್ರತ್ಯೇಕ ವಾಹನವುಬೇಕೆಂದು, ವಾಹನವು ಇಲ್ಲದಿದ್ದರೆ ಕಛೇರಿಗೆ ಬರಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದರು. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಾಗಿತ್ತು. ಈ ಬಗ್ಗೆ ಸರ್ಕಾರವು ಪರಿಶೀಲಿಸಿ ಕಛೇರಿಯ ಅಧಿಕಾರಿಗಳು ವಾಹನವನ್ನು ಕಛೇರಿಯ ನಿಯಮಿತ ಕೆಲಸಕಾರ್ಯಗಳಿಗೆ ಮಾತ್ರ ಉಪಯೋಗಿಸಬೇಕೆಂದು ತಿಳಿಸಿದ್ದರು.

ಅದರಂತೆ, ಕಾರ್ಯನಿರ್ವಹಣಾಧಿಕಾರಿಗಳು ಕಛೇರಿಯಿಂದ ನಿವಾಸಕ್ಕೆ ಹಾಗೂ ನಿವಾಸದಿಂದ ಕಛೇರಿಗೆ ಓಡಾಡಲು ವಾಹನದ ಬಳಕೆಯನ್ನು ನಿಲ್ಲಿಸಲಾಗಿತ್ತು. ಇದರ ಉದ್ದೇಶವಾಗಿ ಮಂಡಳಿಯ ಸದಸ್ಯ ಕಾರ್ಯದರ್ಶಿಯ ವಿರುದ್ಧವಾಗಿ ಒಂದು ಪಿಟಿಷನ್ ಬಂದಿರುತ್ತದೆ. ಈ ವಿಷಯವನ್ನು ಸಹ ಮಂಡಳಿಯ ಮುಂದೆ ಇಡಲಾಗಿದೆ. ಮಂಡಳಿಯ ಕಾರ್ಯನಿರ್ವಹಣಾಧಿಕಾರಿಗಳು ಕಛೇರಿಯಿಂದ ನಿವಾಸಕ್ಕೆ ಹಾಗೂ ನಿವಾಸದಿಂದ ಕಛೇರಿಗೆ ಓಡಾಡಲು ವಾಹನವನ್ನು ಬಳಸಲು ಅನುಮತಿ ನೀಡಬಹುದೆ?

ಇತ್ತೀಚಿನ ದಿನಗಳಲ್ಲಿ ಕಛೇರಿಯ ಕೆಲಸಕಾರ್ಯಗಳಿಗೆ ಬಹುಮಹಡಿ ಕಟ್ಟಡ, ವಿಧಾನಸೌಧ ಮತ್ತು ಇನ್ನಿತರ ಕಛೇರಿಗೆ ಓಡಾಡಲು ಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ಪೂಲ್ಡ್ ವಾಹನವನ್ನು (ಟಾಟಾ ಸುಮೋ)ವನ್ನು ಉಪಯೋಗಿಸಲು ಅನುಮತಿ ನೀಡಿದ್ದು, ಅದರಂತೆ ಅವರುಗಳು ವಾಹನವನ್ನು ಬಳಸುತ್ತಿದ್ದಾರೆ. ಈ ವಿಷಯವನ್ನು ಮಂಡಳಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

28th January 2008

Sub: Publishing of News letter by Karnataka Biodiversity Board.

****

It is suggested that Karnataka Biodiversity Board should publish A Bilingual quarterly “New letter” by inviting news on various aspects of biodiversity and related issues from Pioneer Research Institutes, Universities, Industries, Drug companies and Research Scholars etc

The Board is requested to kindly approve the suggestion.

**1st February 2008**

**Sub: Publication of proceedings on National Seminar on Plant Resources of Western Ghats.**

********

Karnataka Biodiversity Board has organized a “**National Seminar on Plant Resources of Western Ghats” on 7-8 December 2006** sponsored by National Biodiversity Authority, Chennai. More than 100 delegates were attended and presented the papers. (Oral and Postal) The abstract volume was published by the Karnataka Biodiversity Board. The National Biodiversity Authority chairman Prof. Kanniyan enquired about the publications of the proceedings and there has been demand by the delegates of the seminar for publication of proceedings. In this connection KBB proposes to bring out the proceedings of the seminar. The cost of the publication is approximately Rs. 75,000/- (Rupees Seventy Five thousand only)

This is brought to the notice of the Board.